ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿ/ಪರೀಕ್ಷೆ/ಖಾ.ಅ.ನೋ/2019-20 ದಿನಾಂಕ: 11.10.2019.

# ಸುತ್ತೋಲೆ

ವಿಷಯ: 2020ರ ದ್ವಿತೀಯ ಪಿಯುಸಿ ಖಾಸಗಿ (Private) ಅಭ್ಯರ್ಥಿಗಳಾಗಿ ನೋಂದಾಯಿಸಿಕೊಳ್ಳಲು ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ

ಉಲ್ಲೇಖ:
1. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಪೂಶಿ/ಪರೀಕ್ಷೆ/ಖಾ.ಅ.ನೋ/2019-20 ದಿನಾಂಕ: 31.07.2019.
2. ಈ ಕಛೇರಿ ಸಮಸಂಖ್ಯೆ: ಪಪೂಶಿಇ/ಪರೀಕ್ಷೆ/ಖಾ.ಅ.ನೋ/2019-20 ದಿನಾಂಕ:19.09.2019

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಚ್ 2020ರಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ (Private) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಉಲ್ಲೇಖಿದನ್ವಯ ದಂಡ ಶುಲ್ಕವಿಲ್ಲದೆ ದಿನಾಂಕ 05.09.2019 ಹಾಗೂ ದಂಡ ಸಹಿತ ಶುಲ್ಕದೊಂದಿಗೆ 18.09.2019ನ್ನು ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿತ್ತು. ವಿಶೇಷ ದಂಡ ಶುಲ್ಕದೊಂದಿಗೆ ದಿನಾಂಕ:19.09.2018 ರಿಂದ 04.10.2019 ರವರೆಗೆ ದಿನಾಂಕವನ್ನು ವಿಸ್ತರಿಸಲಾಗಿತ್ತು, ವಿದ್ಯಾರ್ಥಿಗಳ ಹಾಗೂ ಪೋಷಕರ ಮನವಿಯ ಮೇರೆಗೆ ಮಾರ್ಚ್ 2020ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು / ಪರೀಕ್ಷಾ ಶುಲ್ಕ ಸಂದಾಯ ಮಾಡಲು ಕಡೆಯ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.

| ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಹಾಗೂ ಕಾಲೇಜಿನವರು Online Portal ನಲ್ಲಿ upload ಮಾಡಲು ಕಡೇ ದಿನಾಂಕ | ಕಾಲೇಜಿನವರು ವಿಸ್ತರಿಸಲಾದ ದಿನಾಂಕಗಳಲ್ಲಿ ಸ್ವೀಕರಿಸಿದ ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತಲುಪಿಸುವ ದಿನಾಂಕ |
|---|---|---|
| **24.10.2019** | **25.10.2019** | **30.10.2019** |

ಅರ್ಜಿ ಸ್ವೀಕರಿಸಲು ವಿಸ್ತರಿಸಲಾದ ದಿನಾಂಕಗಳಲ್ಲಿ ಸ್ವೀಕರಿಸಿ ಪಾವತಿಸಬೇಕಾದ ಶುಲ್ಕ ವಿವರ

| ಇಲಾಖಾ ಮೂಲ ಅಧಿಸೂಚನೆ ಸಮಸಂಖ್ಯೆ ದಿನಾಂಕ 31.07.2019 ರನ್ವಯ | ಸುತ್ತೋಲೆಯಲ್ಲಿ ವಿವರಿಸಿದಂತೆ ಶುಲ್ಕ |
|---|---|
| ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಡಿ 2017, ಬೆಂಗಳೂರು ದಿನಾಂಕ:20.03.2018 ರನ್ವಯ ವಿಸ್ತರಿಸಿದ ದಿನಾಂಕಕ್ಕೆ ದಂಡ ಶುಲ್ಕ<br>ಇಲಾಖಾ ಮೂಲ ಅಧಿಸೂಚನೆ ಸಮಸಂಖ್ಯೆ: ಪಪೂಶಿ/ಪರೀಕ್ಷೆ/ಖಾ.ಅ.ನೋ/2018-19 ದಿನಾಂಕ: 31.07.2019 ರನ್ವಯ ದಂಡ ಶುಲ್ಕ<br>ದಿನಾಂಕ:06.09.2019 ರಿಂದ ದಿನಾಂಕ 18.09.2019 ರವರೆಗಿನ ದಂಡ ಶುಲ್ಕ | ರೂ 500/-<br>(ರಜಾ ದಿನಗಳನ್ನು ಹೊರತು ಪಡಿಸಿ) |
| ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಡಿ 2017, ಬೆಂಗಳೂರು ದಿನಾಂಕ:20.03.2018 ರನ್ವಯ ವಿಸ್ತರಿಸಿದ ದಿನಾಂಕಕ್ಕೆ ದಂಡ ಶುಲ್ಕ<br>ಇಲಾಖೆ ಸುತ್ತೋಲೆ ಸಮಸಂಖ್ಯೆ ಪಪೂಶಿ/ಪರೀಕ್ಷೆ/ಖಾ.ಅ.ನೋ/2018-19 ದಿನಾಂಕ: 19.09.2019 ರನ್ವಯ ವಿಸ್ತರಿಸಿದ ದಿನಾಂಕ<br>ದಿನಾಂಕ: 18.09.2019 ರಿಂದ 04.10.2019 ರವರೆಗೆ ದಂಡ ಶುಲ್ಕ | ರೂ. 980/-<br>(ರಜಾ ದಿನಗಳನ್ನು ಹೊರತು ಪಡಿಸಿ) |
| ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಡಿ 2017, ಬೆಂಗಳೂರು ದಿನಾಂಕ:20.03.2018 ರನ್ವಯ ವಿಸ್ತರಿಸಿದ ದಿನಾಂಕಕ್ಕೆ ದಂಡ ಶುಲ್ಕ<br>ಪ್ರಸ್ತುತ ವಿಸ್ತರಿಸಿದ ದಿನಾಂಕ 14.10.2019 ರಿಂದ 24.10.2019 ರವರೆಗೆ ವಿಶೇಷ ದಂಡ ಶುಲ್ಕ | **1320/-**<br>(Exam Fees+500+980+1320) |

ಸದರಿ ಪರೀಕ್ಷೆಗಳಿಗೆ ಖಾಸಗಿ (Private) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು **ಇದೇ ಅಂತಿಮ ಅವಕಾಶವಾಗಿರುತ್ತದೆ.** ಆದಕಾರಣ ಮೇಲೆ ತಿಳಿಸಿರುವ ದಿನಾಂಕದ ನಂತರ ಕಾಲೇಜಿನ ಪ್ರಾಂಶುಪಾಲರು ಯಾವುದೇ ಖಾಸಗಿ ಅಭ್ಯರ್ಥಿಗಳ ಅರ್ಜಿಗಳನ್ನು ಸ್ವೀಕರಿಸಕೂಡದು. ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕವನ್ನು ಮತ್ತೊಮ್ಮೆ ವಿಸ್ತರಿಸಲಾಗುವುದಿಲ್ಲ.

ಜಿಲ್ಲಾ ಉಪನಿರ್ದೇಶಕರು ಒಂದೇ ಕಂತಿನಲ್ಲಿ ಎಲ್ಲಾ ಖಾಸಗಿ (Private) ಅಭ್ಯರ್ಥಿಗಳ ಅರ್ಜಿಗಳನ್ನು ಮುದ್ದಾಗಿ ಇಲಾಖೆಗೆ ದಿನಾಂಕ **31.10.2019** ರಂದು ಕೇಂದ್ರ ಕಛೇರಿಗೆ ಸಲ್ಲಿಸುವುದು.

ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ,

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು ಅಗತ್ಯಕ್ರಮಕ್ಕಾಗಿ :

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ.
2. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ಇಲಾಖಾ ಇ–ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ :

4. ಉಪ ನಿರ್ದೇಶಕರು (ಪರೀಕ್ಷೆ) ಪದವಿ ಪೂರ್ವ ಶಿಕ್ಷಣ ಇಲಾಖೆ
5. ಕಛೇರಿ ಪ್ರತಿ.